
ಡಿವೋರ್ಸ್ ಕೇಸುಗಳ ಸಂಖ್ಯೆ ಹೆಚ್ಚುತ್ತಿದ್ದರೂ ಫ್ಯಾಮಿಲಿ ಕೋರ್ಟ್‌ಗಳು ಮಾತ್ರ ಇದ್ದಷ್ಟೇ ಇವೆ. ಪರಿಣಾಮ ಪ್ರಕರಣ ಇತ್ಯರ್ಥವಾಗಲು ವಿಳಂಬವಾಗುತ್ತಿದೆ. ಹೀಗಾಗಿ ಕೋರ್ಟ್ ಮೆಟ್ಟಿಲು ಹತ್ತಿದ ದಂಪತಿಯರಿಗೆ ಬರೀ ಅಲೆದಾಟವೇ ಉದ್ಯೋಗವಾಗುತ್ತಿದೆ!



# ಡಿವೋರ್ಸ್ ಡಿಲೇ...

## ನ್ಯಾಯದೇಗುಲದಲ್ಲಿ...




ಡಿವೋರ್ಸ್ ಕೇಸು ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದಕ್ಕೆ ಸಣ್ಣ ಉದಾಹರಣೆ. ಕೆಲವು ತಿಂಗಳ ಹಿಂದಿನ ಮಾತು. ಬೆಂಗಳೂರಿನ ನ್ಯಾಯದೇಗುಲದ ಆವರಣ. ಆತ 7 ವರ್ಷದ ಬಾಲಕ. ಮಧ್ಯವಯಸ್ಕನೊಬ್ಬ ಬಾಲಕ ನನ್ನು ಹಿಡಿದು ಎಳೆದೊಯ್ಯಲು ಯತ್ನಿಸುತ್ತಿದ್ದಾನೆ. ಬಾಲಕನಾದರೋ ಮೆಟ್ಟಿಲು ಹತ್ತುವ ಬದಿಯಲ್ಲಿರುವ ಕಬ್ಬಿಣದ ಸರಳನ್ನು ಬಲವಾಗಿ ಹಿಡಿದು 'ಕಾಪಾಡಿ, ಕಾಪಾಡಿ' ಎಂದು ಕೂಗುತ್ತಿದ್ದಾನೆ. ಅಲ್ಲಿದ್ದವರು ಆ ಮಧ್ಯವಯಸ್ಕನಿಂದ ಬಾಲಕನನ್ನು ಕಷ್ಟಪಟ್ಟು ಬೇರೆ ಮಾಡಿದರು.

ಆಮೇಲೆ ಗೊತ್ತಾಗಿದ್ದು ಹೀಗೆ- ಬಾಲಕನನ್ನು ಎಳೆದೊಯ್ಯಲು ಯತ್ನಿಸುತ್ತಿದ್ದದ್ದು ಬೇರೆ ಯಾರೂ ಅಲ್ಲ, ಆತನ ತಂದೆ. ಅದು ಡಿವೋರ್ಸ್ ಅರ್ಜಿ ಸಂಬಂಧ ಮಗನ ಜತೆ ಕೆಲ ಗಂಟೆ ಕಾಲ ಇರಲು ತಂದೆಗೆ ಕೋರ್ಟ್ ಅನುಮತಿಸಿತ್ತು. ಆದರೆ, ಮಗನಿಗೆ ತಂದೆ ಜತೆ ಇರಲು ಇಷ್ಟವಿಲ್ಲ. ತಂದೆ ತನ್ನನ್ನು ಕರೆದೊಯ್ಯಲು ಯತ್ನಿಸಿದಾಗ ಸಹಾಯಕ್ಕಾಗಿ ಕೂಗಿಕೊಂಡಿದ್ದ.

ಫ್ಯಾಮಿಲಿ ಕೋರ್ಟ್ ಆವರಣದಲ್ಲಿ ಕೆಲವೊಮ್ಮೆ ಇಂತಹ ದೃಶ್ಯಗಳನ್ನು ಕಾಣಬಹುದು. ವಿಸಿಟೇಶನ್ ಅಂದರೆ ಡಿವೋರ್ಸ್ ಅರ್ಜಿಯಲ್ಲಿ ಕೋರ್ಟ್ ಆವರಣದಲ್ಲೇ ತಂದೆಗೆ ತಮ್ಮ ಮಕ್ಕಳ ಜತೆ ಒಂದು ಅಥವಾ ಎರಡು ತಾಸು ಇರಲು ನ್ಯಾಯಾಲಯ ಅನುಮತಿ ನೀಡುತ್ತದೆ. ಸಾಮಾನ್ಯವಾಗಿ 15 ದಿನಗಳಿಗೆ ಒಮ್ಮೆ ಹೀಗೆ ಅವಕಾಶ ಉಂಟು.

## ಕೇಂದ್ರ ಅಸ್ತು

**ಡಿವೋರ್ಸ್‌ಗೆ ಕಾಯುತ್ತಿರುವವರಿಗೆ ಇಲ್ಲೊಂದು ಸಂತಸದ ಸುದ್ದಿ. ಡಿವೋರ್ಸ್ ಡಿಲೇಗೆ ಪರಿಹಾರ ಕಂಡು ಹಿಡಿಯಲು ಕೇಂದ್ರ ಸರ್ಕಾರ ಮುಂದಾಗಿದೆ. ಹಿಂದೂ ವಿವಾಹ ವ್ಯವಸ್ಥೆಯಲ್ಲಿ ಡಿವೋರ್ಸ್ ಸುಲಭವಾಗುವಂತೆ ವಿವಾಹಕ್ಕೆ ಸಂಬಂಧಿಸಿದ ಎರಡು ಕಾಯ್ದೆಗಳಿಗೆ ತಿದ್ದುಪಡಿ ತರುವ ಮಸೂದೆಗೆ ಕೇಂದ್ರ ಸಂಪುಟ ಇತ್ತೀಚೆಗೆ ಒಪ್ಪಿಗೆ ನೀಡಿದೆ. 1955ರ ಹಿಂದೂ ವಿವಾಹ ಕಾಯ್ದೆ ಮತ್ತು 1954ರ ವಿಶೇಷ ವಿವಾಹ ಕಾಯ್ದೆಗೆ ತಿದ್ದುಪಡಿ ತರುವ 2010ರ ವಿವಾಹ ಕಾನೂನು ಮಸೂದೆ ಇದು.**

**ವೈವಾಹಿಕ ಸಂಬಂಧ ಮುರಿದು ಬಿದ್ದಿರುವುದನ್ನು ಪತಿ ಇಲ್ಲವೇ ಪತ್ನಿ ಸಂದೇಹಕ್ಕೆ ಎಡೆಯಿಲ್ಲದಂತೆ ಸಾಬೀತುಪಡಿಸಿದರೆ ಏಕಪಕ್ಷೀಯವಾಗಿ ವಿಚ್ಛೇದನ ಪಡೆಯುವುದನ್ನು ಇದು ಸಾಧ್ಯವಾಗಿಸಲಿದೆ. ಪ್ರತಿವಾದಿಯ ಒಪ್ಪಿಗೆ ಇಲ್ಲದಿದ್ದರೂ ಡಿವೋರ್ಸ್ ಪಡೆಯಬಹುದು.**

**ಕೂಡ್ಲಿ ಗುರುರಾಜ**

ಆತನ ಹೆಸರು ಮೋಹನ್ (ಹೆಸರು ಬದಲಿಸಲಾಗಿದೆ). ವಯಸ್ಸು 32. ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಮದುವೆಯಾಗಿ ನಾಲ್ಕೇ ದಿನ ಕೂಡಿ ಬಾಳಿದ್ದು. ಗಂಡ-ಹೆಂಡತಿಯಲ್ಲಿ ಪರಸ್ಪರ ಅನುಮಾನಗಳು. ಗಂಡನ ಮೇಲೆ ಹೆಂಡತಿಯಿಂದ ವರದಕ್ಷಿಣೆ ಕಿರುಕುಳ ದೂರು. ಮೋಹನ್ ಜೈಲು ಸೇರಿ ಜಾಮೀನಿನ ಮೇಲೆ ಹೊರ ಬಂದ ನಂತರ ಡಿವೋರ್ಸ್‌ಗೆ ಅರ್ಜಿ. ರಾಜಿ ಪ್ರಯತ್ನಕ್ಕೆ ಸೋಲು. ನಾಲ್ಕು ವರ್ಷವಾದರೂ ಮೋಹನ್ ಕೇಸು ಫೈಸಲ್ ಆಗುತ್ತಿಲ್ಲ. ಸಂಸಾರವೂ ಇಲ್ಲ. ಬೇರೆ ಮದುವೆಯೂ ಆಗುವಂತಿಲ್ಲ.

ಇದು ಒಬ್ಬ ಮೋಹನನ ಕತೆಯಲ್ಲ. ಹಲವು ಮೋಹನರ ವ್ಯಥೆ.

### ಡಿವೋರ್ಸ್...


ಒಂದು ಕಾಲದಲ್ಲಿ ಈ ಪದ ಕೇಳಿದರೆ ಬೆಚ್ಚಿ ಬೀಳುವಂತಾಗುತ್ತಿತ್ತು. ಡಿವೋರ್ಸ್ ಕೇಸ್ ಆಗಿದೆ ಅಂದರೆ ಅಂಥವರನ್ನು ನೋಡುವ ದೃಷ್ಟಿಯೇ ಚೇಂಜ್. ಅಂತಹ ಡಿವೋರ್ಸ್ ಇವತ್ತು ಅಚ್ಚರಿ ತರುವುದಿಲ್ಲ. ನಿಮಗೆ ಗೊತ್ತಿರಲಿ; ಬೆಂಗಳೂರಿನಲ್ಲಿ ಪ್ರತಿದಿನ ವಿಚ್ಛೇದನದ ಸರಾಸರಿ ಕೇಸು 10.

ಆದರೆ, ಅಷ್ಟೇ ಸ್ಪೀಡಾಗಿ ಡಿವೋರ್ಸ್ ಕೇಸುಗಳು ಇತ್ಯರ್ಥ ಆಗುತ್ತಿವೆಯೇ?

ನೋ ವೇ. ಈ ವಿಳಂಬ ಇಡೀ ಕುಟುಂಬದ ಮೇಲೆ ಎಫೆಕ್ಟ್ ಮಾಡಿದೆ. ಡಿವೋರ್ಸ್ ಸಿಗದೇ ಮತ್ತೊಂದು ಮದುವೆ ಆಗುವಂತಿಲ್ಲ. ಕೇಸ್ ಇತ್ಯರ್ಥ ವಿಳಂಬವಾಗಿ ಅವರ ಬದುಕಿನ ಯೌವ್ವನವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇವತ್ತು ಅನೇಕ ಯುವಕರ ಸ್ಥಿತಿ ಇದೇ ಆಗಿದೆ. ದೇಶದಲ್ಲಿ ಇವತ್ತು ಡಿವೋರ್ಸ್ ಕೇಸುಗಳ ಸಂಖ್ಯೆ ಏರುತ್ತಿದೆ. ಬೆಂಗಳೂರು ಇದಕ್ಕೆ ಹೊರತಲ್ಲ. ಬೆಂಗಳೂರಿನ ಫ್ಯಾಮಿಲಿ ಕೋರ್ಟ್‌ಗಳಲ್ಲಿ 2008ರಲ್ಲಿ ಡಿವೋರ್ಸ್ ಕೇಸ್‌ಗಳು ದಾಖಲಾಗಿದ್ದು ಸರಾಸರಿ 3200. ಈ ಸಂಖ್ಯೆ ಮರುವರ್ಷ ಸುಮಾರು 3,600ಕ್ಕೆ ಹೆಚ್ಚಿತು. ಈ ವರ್ಷ ಈವರೆಗೂ 1400 ಗಡಿ ದಾಟಿದೆ. ಮುಂಬೈನಲ್ಲಿ 2008ರಲ್ಲಿ ಸುಮಾರು 7,500 ಡಿವೋರ್ಸ್ ಕೇಸುಗಳು ದಾಖಲಾಗಿದ್ದವು.

### ಏನಿದರ ಅರ್ಥ?

ದಾಂಪತ್ಯ ಜೀವನದಲ್ಲಿ ಬಿರುಕುಗಳು ಹೆಚ್ಚಾಗುತ್ತಿವೆ. ಪರಿಸ್ಥಿತಿ ಕೈ ಮೀರಿದರೆ ವಿಚ್ಛೇದನಕ್ಕೆ ಗಂಡ-ಹೆಂಡತಿ ಇಬ್ಬರೂ ರೆಡಿ. ಸ್ವಲ್ಪ ಹೆಚ್ಚು ಕಡಿಮೆಯಾದರೂ ದಾಂಪತ್ಯ ಜೀವನಕ್ಕೆ ಡೋಂಟ್ ಕೇರ್. ಪರಿಣಾಮ- ಫ್ಯಾಮಿಲಿ ಕೋರ್ಟ್‌ಗಳಲ್ಲಿ ಕೇಸುಗಳ ಸಂಖ್ಯೆ ಏರಿಕೆ. ಆದರೆ, ಅದಕ್ಕೆ ಅನುಗುಣವಾಗಿ ಕೋರ್ಟ್‌ಗಳ ಸಂಖ್ಯೆ ಏರುತ್ತಿಲ್ಲ. ಸ್ವಯಂಸೇವಾ ಸಂಸ್ಥೆ ಫ್ಯಾಮಿಲಿ ಹಾರ್ಮೊನಿ ಸೊಸೈಟಿ ಪ್ರಕಾರ, ಬೆಂಗಳೂರಿನ ಫ್ಯಾಮಿಲಿ ಕೋರ್ಟ್‌ಗಳಲ್ಲಿ ಕೆಲವು ವರ್ಷಗಳಿಂದ ಸುಮಾರು 13 ಸಾವಿರ ಡಿವೋರ್ಸ್ ಕೇಸುಗಳು ಇತ್ಯರ್ಥ ಕಂಡಿಲ್ಲ.



ಡಿವೋರ್ಸ್ ಕೇಸೊಂದು ನ್ಯಾಯಾಲಯದಲ್ಲಿ ಇತ್ಯರ್ಥವಾಗಲು 11-15 ವರ್ಷ ಬೇಕು. ಮೊದಲು ಕೌಟುಂಬಿಕ ನ್ಯಾಯಾಲಯದಲ್ಲಿ 5-7 ವರ್ಷ, ನಂತರ ಹೈಕೋರ್ಟ್‌ನಲ್ಲಿ 3-4 ವರ್ಷ, ಸುಪ್ರೀಂಕೋರ್ಟ್‌ನಲ್ಲಿ 3-4 ವರ್ಷ ಬೇಕು. ಯಾವುದೇ ಒಂದು ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲು ತುಳಿದರೆ ಇತ್ಯರ್ಥವಾಗಲು ಸುಮಾರು 15 ವರ್ಷ ಆಗುತ್ತದೆ.

ಇಲ್ಲೇ ಇರುವುದು ಪ್ರಶ್ನೆ. ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿರುವವರು ಈ ಪ್ರಶ್ನೆಯನ್ನೇ ಪ್ರಮುಖವಾಗಿ ಎತ್ತಿದ್ದಾರೆ. ನಾವು ಮದುವೆಯಾಗಿ ನಾಲ್ಕು ದಿನ, ನಾಲ್ಕು ತಿಂಗಳು ಇಲ್ಲವೇ ನಾಲ್ಕು ವರ್ಷ ಬಾಳಿರುವುದಿಲ್ಲ. ಆದರೆ, ವಿಚ್ಛೇದನ ಪ್ರಕರಣ ಇತ್ಯರ್ಥವಾಗಲು 10-15 ವರ್ಷ ಆಗಿಬಿಟ್ಟರೆ ಅಷ್ಟರಲ್ಲಿ ನಮ್ಮ ಬಾಳಿನ ಹರೆಯವನ್ನೇ ಕಳೆದುಕೊಂಡಿರುತ್ತೇವೆ. ಆಮೇಲೆ ವಿಚ್ಛೇದನ ಸಿಕ್ಕರೆ ಏನು ಪ್ರಯೋಜನ?

ಬೆಂಗಳೂರಿನಲ್ಲಿ ಫ್ಯಾಮಿಲಿ ಕೋರ್ಟ್ ಸ್ಥಾಪನೆಯಾಗಿದ್ದು 1984ರಲ್ಲಿ. ಈಗ ನಾಲ್ಕು ಫ್ಯಾಮಿಲಿ ಕೋರ್ಟ್‌ಗಳಿವೆ. ಆದರೆ, ದಾವೆಗಳ ಸಂಖ್ಯೆ ಏರಿದೆ. ಹೀಗಾಗಿ, ಡಿವೋರ್ಸ್ ಕೇಸುಗಳ ಇತ್ಯರ್ಥದಲ್ಲಿ ಡಿಲೇ...ಡಿಲೇ...

ವಿವಾಹ ವಿಚ್ಛೇದನ ದಾವೆಗಳ ಶೀಘ್ರ ಇತ್ಯರ್ಥಕ್ಕಾಗಿ ಹಲವು ಸಂಘಟನೆಗಳು ಹೋರಾಟ ನಡೆಸಿವೆ. ಫ್ಯಾಮಿಲಿ ಕೋರ್ಟ್ ಸಂಖ್ಯೆಯನ್ನು ಏರಿಸಬೇಕು, ಪ್ರತಿಯೊಂದು ಪ್ರಕರಣ 6 ತಿಂಗಳ ಒಳಗಾಗಿ ಇತ್ಯರ್ಥ ಆಗಬೇಕು. ವಾದಿ-ಪ್ರತಿವಾದಿಯಲ್ಲಿ ಒಬ್ಬರು 2ಕ್ಕಿಂತ ಹೆಚ್ಚು ಸಮಯ ವಿಚಾರಣೆ ಮುಂದೂಡಿಕೆಗೆ ಕೋರಿದರೆ ಹೆಚ್ಚು ದಂಡ ವಿಧಿಸಬೇಕು, ಫ್ಯಾಮಿಲಿ ಕೋರ್ಟ್ ರಜಾ ಕಾಲವನ್ನು ರದ್ದುಪಡಿಸಬೇಕು, ಒಂದು ವರ್ಷ ಹಾಗೂ ಅದಕ್ಕಿಂತ ಹೆಚ್ಚು ಕಾಲದಿಂದ ಇತ್ಯರ್ಥವಾಗದ ದಾವೆಗಳನ್ನು ಕಾಲಮಿತಿಯೊಳಗೆ ಇತ್ಯರ್ಥಪಡಿಸಲು ಸಿಟಿ ಸಿವಿಲ್ ಕೋರ್ಟ್‌ಗೆ ವರ್ಗಾಯಿಸಬೇಕು ಎಂಬ ಒತ್ತಾಯ ಇದೆ.

"ನಿಜ. ಡಿವೋರ್ಸ್ ಕೇಸು ಇತ್ಯರ್ಥವಾಗಲು 2-3 ವರ್ಷ ಬೇಕು. ಫ್ಯಾಮಿಲಿ ಕೋರ್ಟ್ ತೀರ್ಪು ಪ್ರಶ್ನಿಸಿ ಹೈಕೋರ್ಟ್, ಸುಪ್ರೀಂಕೋರ್ಟ್ ಮೊರೆ ಹೋದರೆ 8-10 ವರ್ಷಗಳಾಗಬಹುದು. ಡಿವೋರ್ಸ್‌ಗೆ ಅರ್ಜಿ ಸಲ್ಲಿಸಲು ಈ ಹಿಂದೆ ಪತಿ-ಪತ್ನಿ ಭಯ ಬೀಳುತ್ತಿದ್ದರು. ಈಗ ಪರಿಸ್ಥಿತಿ ಹಾಗಿಲ್ಲ. ಒಬ್ಬರಿಗೆ ಮತ್ತೊಬ್ಬರ ಜತೆ ಬದುಕಲು ಇಷ್ಟ ಇಲ್ಲ ಅಂದ್ರೆ, ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿಯೇ ಬಿಡ್ತಾರೆ. ಹೀಗಾಗಿ, ಕೇಸುಗಳ ಸಂಖ್ಯೆ ಹೆಚ್ಚುತ್ತಿದೆ" ಎನ್ನುತ್ತಾರೆ ವಕೀಲ ರಾಘವೇಂದ್ರ ರೆಡ್ಡಿ.

ಡಿವೋರ್ಸ್ ಡಿಲೇ ಕುಟುಂಬದಲ್ಲಿ ಅದರಲ್ಲೂ ಮುಖ್ಯವಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಕ್ಕಳು ತಂದೆ ಅಥವಾ ತಾಯಿಯ ಪ್ರೀತಿ, ವಾತ್ಸಲ್ಯವನ್ನು ಕಳೆದುಕೊಳ್ಳುತ್ತಾರೆ. ಮನೆಯಿಂದ ಪಾರಾಗಲು ಯೋಚಿಸುತ್ತಾರೆ. ವಿವಾಹ ವಿಚ್ಛೇದನಗಳಲ್ಲಿ ಹೆಚ್ಚು ಬೆಲೆ ತೆರುವುದು ಮಕ್ಕಳೇ. ಹೊಸ ತಲೆಮಾರಿನ ತಂದೆ ತನ್ನ ಹಕ್ಕುಗಳಿಗಾಗಿ ಪ್ರಬಲ ಹೋರಾಟ ನಡೆಸುತ್ತಾನೆ. ಆರ್ಥಿಕವಾಗಿ ದೃಢತೆ ಸಾಧಿಸಿರುವ ತಾಯಿ ಕೂಡ ಸುಮ್ಮನಿರುವವಳಲ್ಲ. ಆಕೆಯೂ ಕೂಡ ಸರಿಸಮನಾದ ಹೋರಾಟ ನಡೆಸುತ್ತಿದ್ದಾಳೆ. ಹೀಗಾಗಿ, ದಾಂಪತ್ಯದಲ್ಲಿ ಕಾಂಪ್ರಮೈಸ್ ಎಂಬ ಮಾತು ನಿಧಾನವಾಗಿ ಮರೀಚಿಕೆಯಾಗುತ್ತಿದೆ.

kudliguruuraj@vijayanext.com

## ರಾಜಿದಾರರು ಏನಂತಾರೆ?



ರಾಜಿಗೆ ಬಂದಾಗ ಕೆಲವರು ಮಾನಸಿಕ ವಾಗಿ ಖಿನ್ನರಾಗಿರು ತ್ತಾರೆ. ಅವರನ್ನು ಸರಿ ಮಾಡೋದು ಕಷ್ಟ ಆಗಿರುತ್ತದೆ. ಎಲ್ಲಿ ಮೂರನೇ ವ್ಯಕ್ತಿ ಇವರ ಲೈಫ್‌ನಲ್ಲಿ ಎಂಟ್ರಿ ಆಗಿರುತ್ತಾನೋ ಅಂಥದ್ದನ್ನು ಪರಿಹಾರ ಮಾಡೋದು ಬಹಳ ಕಷ್ಟ. ಎಲ್ಲಿವರೆಗೂ ಆ ಮೂರನೇ ವ್ಯಕ್ತಿಯನ್ನು ಬೇರೆ ಮಾಡಲು ಸಾಧ್ಯವಿಲ್ಲವೋ ಅಲ್ಲಿವರೆಗೂ ಗಂಡ-ಹೆಂಡತಿ ಯನ್ನು ಸರಿ ಮಾಡಲು ಸಾಧ್ಯವಿಲ್ಲ. ರಾಜಿಗೆ ಬರದೇ ಇರುವವರಲ್ಲಿ ಸಾಮಾನ್ಯವಾಗಿ ಮಹಿಳೆಯರ ಸಂಖ್ಯೆಯೇ ಹೆಚ್ಚು. ಪತಿಯ ದೌರ್ಬಲ್ಯಗಳ ಬಗ್ಗೆ ಪತ್ನಿಗೆ ಸಿಟ್ಟಿರುತ್ತದೆ. ಆದರೆ, ಪತಿ ದೌರ್ಬಲ್ಯಗಳನ್ನು ಬಿಡಲು ಸಿದ್ಧನಿರೋದಿಲ್ಲ. ಮಾತುಕತೆಯಿಂದ ಬಗೆಹರಿಯದ ಕೇಸ್ ಯಾವುದೂ ಇಲ್ಲ. ಆದರೆ, ಮೂರನೇ ವ್ಯಕ್ತಿ ಅಲ್ಲಿ ಪ್ರವೇಶಿಸಿರಬಾರದು ಅಷ್ಟೇ.

**-ಆರ್.ಶಿವಶಂಕರ್,**

ರಾಜಿದಾರ, ಸೇವ್ ಇಂಡಿಯನ್ ಫ್ಯಾಮಿಲಿ ಫೌಂಡೇಶನ್.